6	Bidar	1580	3981.60
7	Bijapur	1737	4377.24
8	Chamarajanagar	46	115.92
9	Chickmagalore	32	80.64
10	Chitradurga	209	526.68
11	Davanagere	86	216.72
12	Dharwad	928	2338.56
13	DK	417	1050.84
14	Gadag	103	269.86
15	Gulbarga	2196	5533.92
16	Hassan	242	609.84
17	Haveri	185	466.20
18	Kodagu	0	0.00
19	Kolar	540	1360.80
20	Koppal	526	1325.52
21	Mandya	0	0.00
22	Mysore	122	307.44
23	Raichur	506	1275.12
24	Shimoga	49	123.48
25	Tumkur	281	708.12
26	Udupi	0	0.00
27	Uttarakannada	250	630.00
	Total	**13627**	**34345.30**

819 (724) ಶ್ರೀ ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು, ಬೈಂದೂರು ವಿಧಾನಸಭಾ ಕ್ಷೇತ್ರದ ಕೋಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತಕ್ಕೆ ಒಳಪಟ್ಟ 05 ಪ್ರೌಢಶಾಲೆಗಳು ಮತ್ತು ಒಂದು ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳೀಯ ಶಾಸಕರನ್ನು

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲು ಇರುವ ತೊಂದರೆಗಳೇನು?

ಆ) ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಅದರ ಬಗ್ಗೆ ವಿವರ ನೀಡುವುದು.

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಅ) ದಿನಾಂಕ 10.08.2001ರ ಸರ್ಕಾರದ ಆದೇಶ ಸಂಖ್ಯೆ ಇಡಿ 01 ಪಿಬಿಎಸ್ 01 ರನ್ವಯ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಸಂಬಂಧಿಸಿದ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಲು ಆಸ್ಪದವಿದೆ. ಅದು ಖಾಸಗಿ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಆದುದರಿಂದ ಅದಕ್ಕೆ ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮತ್ತು ಇ) (ಅ) ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

820 (725) ಶ್ರೀ ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಂದೂರು ಕ್ಷೇತ್ರ ಶಿಕ್ಷಾಧಿಕಾರಿಗಳ ವ್ಯಾಪ್ತಿಯು ತೀರಾ ವಿಸ್ತಾರವಾಗಿದ್ದು, ಇವರಿಗೆ ಶಾಲೆಗಳ ಪರಿವೀಕ್ಷಣೆ ಮತ್ತು ಸಂದರ್ಶನದ ಬಗ್ಗೆ ಪ್ರಯಾಣಕ್ಕೆ ಜೀಪ್ ನೀಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವರಿಗೆ ಸರ್ಕಾರದಿಂದ ಯಾವಾಗ ಜೀಪ್ ನೀಡಲಾಗುವುದು?

ಶ್ರೀ ಬಿ. ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ಬೈಂದೂರು ಹೊಸದಾಗಿ ಸೃಜನೆಯಾಗಿರುವ ಶೈಕ್ಷಣಿಕ ವಲಯವಾಗಿದ್ದು ಆಡಳಿತ ನಿರ್ವಹಣೆಗೆ ಹಾಗೂ ಅಭಿವೃದ್ಧಿಗೆ ಹೊಸದಾಗಿ ಸೃಜನೆಯಾದ ಶೈಕ್ಷಣಿಕ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಮಾಸಿಕ ರೂ.12000/- ಗಳನ್ನು ಮೀರದಂತೆ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮಂಜೂರಾತಿ ನೀಡಲಾಗಿದೆ.

ಆ) ಹೊಸ ವಾಹನಗಳ ಖರೀದಿಗೆ ಸರ್ಕಾರದಿಂದ ಸದ್ಯಕ್ಕೆ ನಿರ್ಬಂಧ ಇರುವುದರಿಂದ ಪ್ರತಿ ತಿಂಗಳಿಗೆ ರೂ. 12000/- ಗಳನ್ನು ಮೀರದಂತೆ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಶಾಲಾ ಪರಿವೀಕ್ಷಣೆ ಮತ್ತು ಸಂದರ್ಶನಕ್ಕಾಗಿ ನೀಡಲಾಗುತ್ತಿದೆ.